ದಿಃ 19-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿಯರ ಪರ ಶ್ರೀ. **KGP** ವಕೀಲರಿಂದ:

ಸ.ನಂ. 70 ರ ಚೆಕ್ಕುಬಂದಿ ಪೂರ್ವಕ್ಕೆ ಗುಲಬರ್ಗಾ ರಸ್ತೆ, ಪಶ್ಚಿಮಕ್ಕೆ ಚಂದಪ್ಪ ಯಾಳಗಿರಿ, ಉತ್ತರಕ್ಕೆ ದೊಡ್ಮನಿ ರವರ ಹೊಲ ಮತ್ತು ದಕ್ಷಿಣಕ್ಕೆ ಹಳ್ಳ ಇರುತ್ತದೆ. ದಾವಾ ಆಸ್ತಿ ಒಟ್ಟು 12 ಎಕರೆ 19 ಗುಂಟೆ ಇರುತ್ತದೆ. ನಾನು ಪ್ರತಿವಾದಿ ವಿರುದ್ಧ ಆಸ್ತಿ ಕಬ್ಜೆ ಕೇಳಿ ದಾವೆ ಹೂಡಿರುತ್ತೇನೆ. ಪ್ರತಿವಾದಿ 1963 ರಿಂದ ಕಬ್ಜೆ ವಹಿವಾಟಿನಲ್ಲಿರುತ್ತಾನೆ. ಪ್ರತಿವಾದಿ ಹೆಸರು ಪಹಣಿ ಪತ್ರಿಕೆಗೆ ದಾಖಲಾಗಿ ಈಗ 9 ವರ್ಷ ಆಗಿರುತ್ತದೆ. ಸುಸಲಾಬಾಯಿ ಗಂಡ ಯಶ್ವಂರ ನಮ್ಮ ಚಿಕ್ಕಪ್ಪ ಆಗಬೇಕು. ಅವರ ಪಾಲಿಗೆ ಆಸ್ತಿ 3 ಎಕರೆ ಇರುತ್ತದೆ. ಸದರಿ ಆಸ್ತಿ ಸ.ನಂ. 70 ಇದ್ದು ಅದರ ಹಿಸ್ಸಾ ನನಗೆ ಗೊತ್ತಿಲ್ಲ. ಪ್ರತಮೇಶ ತಂದೆ ಶರಣಪ್ಪ ಆಲೂರು ಇವರಿಗೂ ಸಹ ಸದರಿ ಸ.ನಂ. ನಲ್ಲಿ 3 ಎಕರೆ ಜಮೀನು ಇರುತ್ತದೆ. ತಾರಾಬಾಯಿ ಇವರಿಗೆ 2 ಎಕರೆ ಇರುತ್ತದೆ. ಯಲ್ಲಮ್ಮ ಇವರಿಗೆ 3 ಎಕರೆ ಜಮೀನು ಇರುತ್ತದೆ. ಭೀಮಣ್ಣ ತಂ. ಗಾಳಪ್ಪ ಈತನ ಹೆಸರಲ್ಲಿ 5 ಎಕರೆ ಜಮೀನು ಆಗಿರುತ್ತದೆ. ಭೀಮಣ್ಣ ತಂ. ಗಾಳಪ್ಪ ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

<u>(ಈ ಸಮಯದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದರಿಂದ ಕಾಲಾವಕಾಶ ನೀಡಲಾಯಿತು.)</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ